

ಈಗ ಎರಡ್ಮೂರು ದಿನಗಳಿಂದ ಮಲ್ಲವ್ವ ಮನೆಯೊಳಗೆ ಒಲೆಯನ್ನೇ ಹೊತ್ತಿಸಿರಲಿಲ್ಲ. ಹಾಗೊಂದು ವೇಳೆ ಆಕೆ ಒಲೆಯನ್ನು ಹೊತ್ತಿಸಿ ಒಂದು ಗುಟುಕು ಗಂಜಿಯನ್ನು ಮಾಡಿಕೊಂಡು ಕುಡುದು, ತನ್ನ ಹೊಟ್ಟ್ಯಾಗಿನ ಕಳ್ಳುಗಳನ್ನು ಮುಸುರೆ ಮಾಡಿಕೊಳ್ಳಬೇಕೆಂದರೆ ಅಡುಗೆಮನೆಯಲ್ಲಿ ಒಂದು ಬೊಗಸೆಯಷ್ಟು ಹಿಟ್ಟು ಒತ್ತಟ್ಟಿಗಿರಲಿ, ಚಿಟಿಕೆ ಉಪ್ಪು ಸಹ ಇರಲಿಲ್ಲ! ಹಿಂಗಾಗಿ ಆಗಿನಿಂದಲೂ ಬರೀ ನೀರನ್ನೇ ಕುಡುದು ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದ ಆಕೆಯ ಕಣ್ಣೊಳಗೆ ಜೀವ ಬಂದಂಗಾಗಿತ್ತು. ಇದರಿಂದಾಗಿ ಮಲ್ಲವ್ವನ ಮೈಯೊಳಗಿನ ಕಸುವೆಲ್ಲ ಇಂಗಿ ಹೋದಂಗಾಗಿರಲು ಆಕೆ ಯಾವತ್ತಿನಿಂದ ಒಲೆ ಹೊತ್ತಿಸುವುದನ್ನು ನಿಲ್ಲಿಸಿದ್ದಳೋ ಅದಕೂ ಒಂದೆರಡು ದಿನಗಳ ಮುಂಚಿನಿಂದಲೂ ಏನಕೇನ ಕಾರಣಗಳಿಂದಾಗಿ ರೊಟ್ಟಿ ಅಂಗಡಿಯನ್ನು ನಡೆಸುತ್ತಿದ್ದ ಬಾಜೂಮನೆ ನೀಲವ್ವನ ಕೈಯಲ್ಲಿ ಕಟಿ ರೊಟ್ಟಿ ಮಾಡಲು ಹೋಗುವುದನ್ನು ನಿಲ್ಲಿಸಿದ್ದಳಾದ್ದರಿಂದ ಆಕೆಯ ಕೈಗೆ ಬರುತ್ತಿದ್ದ ಪಗಾರ ಕೂಡ ಬರದಂಗಾಗಿತ್ತು. ಇದು ಆಕೆಯನ್ನು ಚಿಂತೆಯಾಗಿ ಕಾಡುತ್ತಿತ್ತು. ಅಂಥದರಲ್ಲಿ ಕಳೆದ ಎಂಟ್ಹತ್ತು ತಿಂಗಳಿಂದ ಮನೆಯ ಮಾರಿಯನ್ನೇ ನೋಡಿರದಿದ್ದ ಆಕೆಯ ಗಂಡ ಶಂಕ್ರ್ಯಾ ಇದ್ದಕ್ಕಿದ್ದಂಗೆ ನಿನ್ನೆ ರಾತ್ರಿ ಮನೆಯೊಳಗೆ ಪ್ರತ್ಯಕ್ಷನಾಗುವುದರ ಮೂಲಕ ಆಕೆಯನ್ನು ಕಂಗೆಡಿಸಿಬಿಟ್ಟಿದ್ದ! ಬದುಕಿನ ಬಗ್ಗೆ ಎಳ್ಳಷ್ಟೂ ಧ್ಯಾಸ ಇರದಿದ್ದ ಆತ ಒಂದು ರೀತಿಯಲ್ಲಿ ಮಲ್ಲವ್ವನ ಪಾಲಿಗೆ ಮಗ್ಗುಲು ಮುಳ್ಳಾಗಿದ್ದ.

ಊರೊಳಗೆ ಮಾಡಲು ಹತ್ತಾರು ಕೆಲಸಗಳಿದ್ದರೂ ಸಹ ಅದನ್ನು ಬಿಟ್ಟು ದುಡಿಯಲು ಮಹಾರಾಷ್ಟ್ರದ ಸಾತಾರ ಪಟ್ಟಣಕ್ಕೆ ಹೋಗುತ್ತೇನೆ ಎಂದು ಹೇಳಿ ಹೋದವನು ಇದುವರೆಗೂ ಜೀವದಿಂದ ಇದ್ದಾನೋ ಅಥವಾ ಸತ್ತುಹೋಗಿದ್ದಾನೋ ಎಂಬುದರ ಸುಳಿವೇ ಮಲ್ಲವ್ವನಿಗೆ ಇರಲಿಲ್ಲ. ಮತ್ತು ಅದೆಲ್ಲ ಆಕೆಗೆ ಬೇಕಾಗಿಯೂ ಇರಲಿಲ್ಲ. ಹಿಂಗಾಗಿ, ಆತನ ಬರುವಿಕೆಯ ನಿರೀಕ್ಷೆಯನ್ನೇ ತೊರೆದು ತನ್ನ ಪಾಡಿಗೆ ತಾನು ವರ್ಷದ ಕೂಸು ಪರಮೇಶಿಯನ್ನು ಕಟ್ಟಿಕೊಂಡು ಹೇಗೆ ಹೇಗೋ ಜಲುಮ ತೆಗೆಯುತ್ತಿದ್ದ ಆಕೆಯ ಬಾಳಿನಲ್ಲಿ ಈಗ ಮತ್ತೆ ಬಿರುಗಾಳಿಯಂತೆ ಬಂದುಬಿಟ್ಟಿದ್ದ! ಇದು ಇನ್ನೊಂದು ರೀತಿಯಲ್ಲಿ ಆಕೆಯ ಸಂಕಟಕ್ಕೆ ಕಾರಣವಾಗಿತ್ತು. ಮಲ್ಲವ್ವನನ್ನು ಕಟ್ಟಿಕೊಂಡಾಗಿನಿಂದಲೂ ಅಕ್ಷರಶಃ ಆಕೆಯ ವಿಚಾರದಲ್ಲಿ ಪಶುವಿನಂತೆಯೇ ವರ್ತಿಸುತ್ತಿದ್ದ ಶಂಕ್ರ್ಯಾ ಈ ದಿನವೂ ಸಹ ಅದೇ ಮನಸ್ಥಿತಿಯಲ್ಲಿ ಇದ್ದವನಂತೆಯೇ ಕಂಠಮಟ್ಟ ಸೆರೆ ಕುಡುದು ಬಂದಿದ್ದ. ಇದು ಮಲ್ಲವ್ವನಿಗೆ ಹೇಸಿಗೆ ತರಿಸಿತ್ತು.

ಶಂಕ್ರ್ಯಾ ಮನೆಯೊಳಗೆ ಕಾಲಿಡುತ್ತಿದ್ದಂಗೆ, ‘ಲೇ, ಮಲ್ಲೀ, ಭೋಸುಡಿ... ನಾ ಊರಾಗ ಇಲ್ಲಂತ ತಿಳ್ದು ಪೋಚಿಗಿ ಬಿದ್ದಿಯೇನು? ನಾ ಜೀವದಿಂದ ಇದ್ದೀನೋ... ಇಲ್ಲ ಸತ್ತು ಹೋಗಿನೋ ಅನ್ನೂದರ ಬಗ್ಗೆ ಒಂದೀಟರೆ ಚಿಂತೆ ಮಾಡಿದ್ದೇನು ಹಲ್ಕಟರಂಡಿ! ಅಷ್ಟಕ್ಕೂ ನನ್ನ ಬಗ್ಗೆ ಚಿಂತೆ ಮಾಡ್ಲಿಕ್ಕೆ ನಿನ್ಗ ಎಲ್ಲಿ ಟೈಮ್ ಐತಿ ಬಿಡು. ನನ್ನ ಮರೆಸುವಂಥ ಮಿಂಡಗಾರ ನಿನ್ನ ಬೆನ್ನಿಗೆ ಇದ್ದಿರಬೇಕು! ಹಂಗಂತನೂ ನಿನ್ಗ ಅಷ್ಟೊಂದು ಪವರ್ ಬಂದೈತೆಲೆ ಚಿನಾಲಿ...’ ಎಂದು ಬಯ್ಯತೊಡಗಿದ. ಆದರೆ, ಮಲ್ಲವ್ವ ಮಾತ್ರ ಒಂದೂ ಮಾತಾಡದೇ, ‘ಎಷ್ಟು ಬಯ್ತೆಲ್ಲ ಬಯ್ಯಿ. ಆ ಬಯ್ಗಳೇನು ನನ್ಗ ಬಂದು ಚುಚ್ಚಂಗಿಲ್ಲ. ನಾನು ಎಷ್ಟು ಪವಿತ್ರ ಇದ್ದೀನಿ ಅನ್ನೂದು ನನ್ನ ಆತ್ಮಾಕಷ್ಟೇ ಗೊತ್ತೈತಿ. ಯಾವತ್ತಿದ್ರೂ ಗಿಡದ ಹೂವು ಗಿಡದ ಸುತ್ತನ ಇರುವಂಗ ನಿನ್ನ ಬಯ್ಗಳೆಲ್ಲನೂ ನಿನ್ನ ಸುತ್ತನೂ ಇರತಾವು ಅನ್ನೂದು ಮರೀಬ್ಯಾಡ...’ ಎಂದು ಮನದೊಳಗೆ ಅಂದುಕೊಳ್ಳುತ್ತ ಕಲ್ಲಿನಂಗೆ ಕುಂತುಬಿಟ್ಟಿದ್ದಳು. ಆಗಲೇ ಆತನ ಒದರಾಟ, ಅರಚಾಟ ಹೆಚ್ಚಾಗುತ್ತಿರುವುದನ್ನು ಕಂಡು ಸಹನೆಯನ್ನು ಕಳೆದುಕೊಂಡ ಮಲ್ಲವ್ವ, ‘ಏಯ್, ಬಾಂವಾ... ಹಂಗ್ಯಾಕದು..!? ಕುಂಡ್ಯಾಗಿನ ಸಿರ ಹರದು ಹೋಗಂಗ ಒದರಾಕತ್ತಿದ್ದೆಲ್ಲ! ನಿನ್ನ ಜಲ್ಮಕ್ಕ ನಾಚ್ಕಿ ಬರಂಗಿಲ್ಲೇನು...!?’ ಎಂದು ಸಿಟ್ಟಿನಲ್ಲಿ ಅಂದಳು.

ಇದರಿಂದ ಮತ್ತಷ್ಟು ರೋಸಿಹೋದ ಶಂಕ್ರ್ಯಾ, ‘ಲೇ, ಹಾದ್ರಗಿತ್ತಿ ಮಗಳೇ... ನಾ ಅಂದ್ರ ನಿನ್ಗ ಖಬರು ಇಲ್ದಂಗಾಗೆದ. ಹಂಗಂತ ಅದ್ಯಾವ ಮಿಂಡಗಾರನ ಕುಮ್ಮಕ್ಕಿನಿಂದ ನೀನು ಹಿಂಗೆಲ್ಲ ನಡೆಸಿದ್ದಿ ಅನ್ನೂದು ನನ್ಗ ಗೊತ್ತೈತಿ. ನೋಡ್ತಿರಲೇ ಚಿನಾಲಿ ನಿನ್ನ ಭಾಳ ದಿನ ಈ ಭೂಮಿ ಮ್ಯಾಲೆ ಬದುಕಲಿಕ್ಕೆ ಬಿಡಂಗಿಲ್ಲ! ಈ ದಿನ ನಿನ್ನ ಕೊಂದ್ಹಾಕಿ ಬಿಡ್ತೀನಿ...’ ಎನ್ನುತ್ತ ಬಂದವನೆ ಆಕೆಯ ಕುತ್ತಿಗೆಗೆ ಕೈಹಾಕಿದ. ಆಗ ಮಲ್ಲವ್ವನಿಗೆ ದಿಕ್ಕೇ ತೋಚದಂತಾಗಲು, ‘ಏಯ್ ಹಾಂಟ್ಯಾನ ಮಗನೂ... ಬಿಡು ನನ್ನ!’ ಎಂದು ಚೀರಾಡುತ್ತ ಆತನ ಎದೆ ಹಿಡಿದು ಜೋರಾಗಿ ನೂಕಿದಳು. ಆ ಕ್ಷಣದಲ್ಲಿ ಆಕೆ ಹಾಗೆ ನೂಕಿದ ರಭಸಕ್ಕೆ ದಢಾರೆಂದು ಅಂಗಳದಲ್ಲಿ ಹೋಗಿ ಬಿದ್ದ ಶಂಕ್ರ್ಯಾನ ಕೈಯಲ್ಲಿ ಆಕೆಯ ಕೊರಳಲ್ಲಿನ ಗುಳದಾಳಿಯು ಕಿತ್ತುಕೊಂಡು ಬಂದಿತ್ತು! ಆದರೆ, ಕ್ಷಣಮಾತ್ರದಲ್ಲಿ ಆತ ಸಾವರಿಸಿಕೊಂಡು ಮೇಲೆದ್ದವನೆ ಆ ಗುಳದಾಳಿಯನ್ನು ತನ್ನ ಅಂಗಿ ಕಿಸೆಗೆ ಹಾಕಿಕೊಂಡು ಹೊರಟು ನಿಂತ. ಆಗ ಹೌಹಾರಿದಂತಾದ ಮಲ್ಲವ್ವನಿಗೆ ದಿಕ್ಕೇ ತೋಚದಂತಾಗಲು ತನ್ನ ಗುಳದಾಳಿಗಾಗಿ ಪರಿಪರಿಯಾಗಿ ಬೇಡಿಕೊಳ್ಳಲಾರಂಭಿಸಿದಳಾದರೂ ಸಹ ಅದಾವುದನ್ನೂ ಕಿವಿಗೆ ಹಾಕಿಕೊಳ್ಳದೇ ತೂರಾಡುತ್ತ ಕತ್ತಲೊಳಗೆ ಕರಗಿಹೋದ. ಹೀಗೆ, ಆ ಹೊತ್ತಲ್ಲಿ ಮಲ್ಲವ್ವ ಎಷ್ಟೆಲ್ಲ ಬೇಡಿಕೊಂಡರೂ ಕೇಳದೇ ತನ್ನ ಮುತ್ತೈದೆತನದ ಸಂಕೇತವಾಗಿದ್ದ ಗುಳದಾಳಿಯನ್ನು ಕಿತ್ತುಕೊಂಡು ಹೋದ ಶಂಕ್ರ್ಯಾನ ಬಗ್ಗೆ ಆಕೆಗೆ ಜಿಗುಪ್ಸೆ ಮೂಡತೊಡಗಿತು. ಆ ಜಿಗುಪ್ಸೆಯ ಕಾರಣವಾಗಿ ಆಕೆಗೆ ಬದುಕೇ ಬೇಡವಾಗಿ ಬರಲು ಒಳಗೊಳಗೆ ಸಂಕಟಪಡತೊಡಗಿದಳು. ಆ ಸಂಕಟದಲ್ಲಿ ಪರಮೇಶಿಯನ್ನು ತೊಡೆಯ ಮೇಲೆ ಎಳೆದುಕೊಂಡು; ತನ್ನ ಚಿಂತೆಗೆ ಆತ ಅತ್ತು ಭಂಗ ತರದಂತೆ ಎದೆಹಾಲು ಇಲ್ಲದೇ ಬತ್ತಿಹೋದ ಮೊಲೆಯನ್ನು ಆತನ ಕಟಬಾಯಿಗೆ ತುರುಕಿ, ತೆರೆದ ಬಾಗಿಲಿನಾಚೆ ಹೊರಗೆ ಅಂಗಳದ ತುಂಬ ಹರಡಿಕೊಂಡಿದ್ದ ಗಾಢವಾದ ಕತ್ತಲನ್ನು ಕಣ್ತುಂಬಿಕೊಂಡು ಕುಂತುಬಿಟ್ಟಳು.

***

ಶಂಕ್ರ್ಯಾನನ್ನು ಮದಿವಿಯಾಗಿ ಮಲ್ಲವ್ವ ಈ ಮನೆಗೆ ಬಂದ ಹೊಸದರಲ್ಲಿ ಸತ್ಯವಾಗಿಯೂ ಈ ಮನೆ ಶಿವನಮನೆಯಂತಿತ್ತು. ಅದ್ಯಾವಾಗಲೋ ಸತ್ತು ಶಿವನಪಾದ ಸೇರಿದ್ದ, ಗೋಡೆಯ ಮೇಲಿನ ಬಣ್ಣಗೆಟ್ಟ ಆಕೆಯ ಮಾವನ ಫೋಟೋವೊಂದನ್ನು